ಆ) ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳಲ್ಲಿ ಎಷ್ಟು ಪಶುವೈದ್ಯರ ಹುದ್ದೆ ಖಾಲಿ ಇವೆ, ಯಾವ ಸಾಲಿನಿಂದ ಖಾಲಿ ಇವೆ; (ವರ್ಷವಾರು, ಜಿಲ್ಲಾವಾರು ವಿವರ ಒದಗಿಸುವುದು, ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಪಶುವೈದ್ಯರ ಹುದ್ದೆ ಖಾಲಿ ಇರುವುದರಿಂದ ಆಸ್ಪತ್ರೆ ಮೇಲ್ದರ್ಜೆಗೇರಿಸಿದ ಉದ್ದೇಶವು ಸಫಲವಾಗಿಲ್ಲ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ: ಯಾವಾಗ ಹುದ್ದೆಗಳನ್ನು ತುಂಬಲಾಗುವುದು, ಹುದ್ದೆಗಳನ್ನು ತುಂಬಲು ಇರುವ ತೊಡಕುಗಳೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಯಾವುದೂ ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ.

(ಪಶುಚಿಕಿತ್ಸಾಲಯಗಳಲ್ಲಿ ಖಾಲಿ ಹುದ್ದೆಗಳನ್ನು ಕಡಿಮೆ ಮಾಡಲು 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ನೇರನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರ ಪ್ರಾರಂಭಿಸಿದೆ.)

ರಾಜ್ಯದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಸತಿ ನಿಲಯ ನಿರ್ಮಾಣ

3055 (3593) : ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–2003ನೇ ಸಾಲಿನ ಆಯವ್ಯಯದ ಹಂಚಿಕೆಯಲ್ಲಿ ಎಷ್ಟು ಅಪೂರ್ಣಗೊಂಡ ವಿದ್ಯಾರ್ಥಿ ವಸತಿ ನಿಲಯ ಕಟ್ಟಡಗಳನ್ನು ಪೂರ್ಣಗೊಳಿಸಲು ನಿಗಧಿಯಾಗಿತ್ತು; ಇದರಲ್ಲಿ ಎಷ್ಟು ವಸತಿ ನಿಲಯಗಳ ಕಾಮಗಾರಿ ಪೂರ್ಣಗೊಳಿಸಲಾಯಿತು;

ಆ) ಈ ಉದ್ದೇಶಕ್ಕೆ ನಿಗದಿಪಡಿಸಿದ ಮತ್ತು ಬಿಡುಗಡೆ ಆದ ಹಣ ಎಷ್ಟು;

ಇ) ಹಿಂದುಳಿದ ವರ್ಗಗಳಿಗೆ ಹೊಸದಾಗಿ ನಿರ್ಮಿಸಬೇಕೆಂದಿದ್ದ ವಸತಿ ನಿಲಯಗಳ ಸಂಖ್ಯೆ ಎಷ್ಟು; ಎಷ್ಟನ್ವಯ ನಿರ್ಮಾಣ ಮಾಡಲಾಗಿದೆ; ಎಷ್ಟು ಅಪೂರ್ಣಗೊಂಡಿವೆ;

ಈ) ಹೊಸ ವಸತಿ ನಿಲಯಗಳ ನಿರ್ಮಾಣಕ್ಕೆ ನಿಗದಿಪಡಿಸಿದ ಮತ್ತು ಬಿಡುಗಡೆ ಆದ ಹಣ ಎಷ್ಟು;

ಉ) ಮೇಲಿನ ಎರಡೂ ಕಾರ್ಯಕ್ರಮಗಳ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೆತ್ತಿಕೊಂಡ ಕಾಮಗಾರಿ ಎಷ್ಟು? (ತಾಲ್ಲೂಕುವಾರು, ವಿದ್ಯಾರ್ಥಿನಿಲಯವಾರು ವಿವರ ಒದಗಿಸುವುದು)

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ 179 ಅಪೂರ್ಣಗೊಂಡಿದ್ದ ಕಟ್ಟಡಗಳಲ್ಲಿ 125 ಕಟ್ಟಡಗಳನ್ನು ಪೂರ್ತಿಮಾಡುವ ಗುರಿಯನ್ನು 2002–2003ರಲ್ಲಿ ನಿಗದಿಪಡಿಸಲಾಗಿದ್ದು ಅವುಗಳ ಪೈಕಿ 55 ಪೂರ್ತಿಗೊಂಡಿದೆ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ 40ರ ಪೈಕಿ 11 ಪೂರ್ತಿಯಾಗಿದೆ. ಹಾಗೆಯೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 4ರ ಪೈಕಿ 2 ಕಟ್ಟಡಗಳು ಪೂರ್ತಿಯಾಗಿದೆ.

ಆ) 2002–03ನೇ ಸಾಲಿನಲ್ಲಿ ನಿಗದಿಪಡಿಸಿದ ಮತ್ತು ಬಿಡುಗಡೆಯಾದ ಹಣದ ವಿವರ ಕೆಳಕಂಡಂತಿದೆ.

		ನಿಗಧಿಯಾದ	ಬಿಡುಗಡೆಯಾದ
1.	ಸಮಾಜ ಕಲ್ಯಾಣ	2763.78	2301.73
2.	ಹಿಂದುಳಿದ ವರ್ಗಗಳ ಇಲಾಖೆ	404.41	404.41
3.	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	100.00	100.00

ಇ) 2002–03 ನೇ ಸಾಲಿನಲ್ಲಿ 100 ಹೊಸ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 50 ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು 50 ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತದೆ. ಪ್ರಸಕ್ತ ಸಾಲಿಗೆ ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಒಟ್ಟು ರೂ. 750.00 ಲಕ್ಷಗಳ ಹಣದ ಅವಕಾಶವಿದ್ದು ಇದರಲ್ಲಿ ರೂ. 152.00 ಲಕ್ಷಗಳನ್ನು 15 ಮುಂದುವರೆದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಉಳಿಕೆಹಣವನ್ನು ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ ವಿನಿಯೋಗಿಸಲಾಗುವುದು.

ಉ) 2002–03 ನೇ ಸಾಲಿನಲ್ಲಿ ಕೈಗೆತ್ತಿಗೊಂಡ ಕಾಮಗಾರಿಗಳ ಸಂಖ್ಯೆ ಕೆಳಕಂಡಂತಿದೆ.

	ಇಲಾಖೆ	ಸಂಖ್ಯೆ
1.	ಸಮಾಜ ಕಲ್ಯಾಣ ಇಲಾಖೆ	5
2.	ಹಿಂದುಳಿದ ವರ್ಗಗಳ ಇಲಾಖೆ	9
3.	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	1

ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಅನುಬಂಧ–1

ಸಮಾಜ ಕಲ್ಯಾಣ ಇಲಾಖೆ:–

1)	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಂದಿಗೂಡು, ಸಾಗರ ತಾಲ್ಲೂಕು	5.00
2)	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತ್ಯಾಗರ್ತಿ, ಸಾಗರ ತಾಲ್ಲೂಕು (ಹೆಚ್ಚುವರಿ ಕಟ್ಟಡ)	22.00
3)	ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಶಿಕಾರಿಪುರ, ಶಿಕಾರಿಪುರ ತಾಲ್ಲೂಕು	47.27
4)	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕು	19.03
5)	ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಶಿವಮೊಗ್ಗ ಟೌನ್ ಕೋಟೆ ರಸ್ತೆ, (ಹೆಚ್ಚುವರಿ ಕಟ್ಟಡ)	26.99
	ಒಟ್ಟು	**120.29**

ಹಿಂದುಳಿದ ವರ್ಗಗಳ ಇಲಾಖೆ:

ಕ್ರ. ಸಂ.		ವಿದ್ಯಾರ್ಥಿನಿಲಯದ ಹೆಸರು	ಕಾಮಗಾರಿ ಪ್ರಾರಂಭವಾದ ವರ್ಷ	ಕಾಮಗಾರಿಗೆ ಬಿಡುಗಡೆ ಆದ ಹಣ	ಷರಾ
1)	ತೀರ್ಥಹಳ್ಳಿ	1) ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಕೋಣಂದೂರು	99–2000	32.19	ಮುಕ್ತಾಯವಾಗಿದೆ.
		2) ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ತೀರ್ಥಹಳ್ಳಿ ಟೌನ್	99–2000	27.80	ಮುಕ್ತಾಯವಾಗಿದೆ.
		3) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಆಗುಂಬೆ, ತೀರ್ಥಹಳ್ಳಿ ತಾಲ್ಲೂಕು	2002–2003	38.72	ಅಪೂರ್ಣಗೊಂಡಿದೆ
2)	ಸೊರಬ	4) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಮಾವಲಿ	2000–2001	14.50	ಅಪೂರ್ಣಗೊಂಡಿದೆ
		5) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಹೊಸಬಾಳೆ	2000–2001	14.50	ಅಪೂರ್ಣಗೊಂಡಿದೆ
		6) ಮೆಟ್ರಿಕ್ ಪೂರ್ವಬಾಲಕರ ವಿದ್ಯಾರ್ಥಿನಿಲಯ ನಿಸರಾಣಿ	2000–2001	15.00	ಅಪೂರ್ಣಗೊಂಡಿದೆ
		7) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕುಪ್ಪಗಡ್ಡೆ	2002–03	23.89	ಅಪೂರ್ಣಗೊಂಡಿದೆ

1	2	3	4	5
	8) ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಅನವಟ್ಟಿ	2002–2003	37.08	ಅಪೂರ್ಣಗೊಂಡಿದೆ
3) ಸಾಗರ	9) ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಆನಂದಪುರ	2002-03	36.28	ಅಪೂರ್ಣಗೊಂಡಿದೆ

ಪರಿಶಿಷ್ಟ ವರ್ಗಗಳ ಕಲ್ಯಾಣ:

ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅಂತರಗಂಗೆ ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.